



ವಿದ್ಯುನ್‌ಗೆ ಅಪ್ಪನೇ ಛಾಯಾಗ್ರಹಣದ ಮೊದಲ ಗುರು. ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ರವಿಶಂಕರ್ ಅವರಿಗೂ ಹೈಸ್ಕೂಲ್ ದಿನಗಳಿಂದಲೇ ಫೋಟೊಗ್ರಫಿ ಕಡೆಗೆ ಒಲವು. ವಿದ್ಯುನ್ ಅಪ್ಪನಿಗೆ ತಕ್ಕ ಮಗ.

ನಿಕಾನ್ ಡಿ5000 ಕ್ಯಾಮೆರಾದೊಂದಿಗೆ ಚಿಟ್ಟೆಗಳು, ಭಿನ್ನ ಜೇಡ ಪ್ರಭೇದಗಳು, ವೈವಿಧ್ಯಮಯ ಕೀಟಗಳು, ಕಪ್ಪೆಗಳು, ಹಕ್ಕಿಗಳ ಚಿತ್ರಗಳನ್ನು ಸೆರೆಹಿಡಿದಿದ್ದಾನೆ ವಿದ್ಯುನ್.

## ಮ್ಯಾಕ್ರೋ ಫೋಟೊಗ್ರಫಿಯತ್ತ ಒಲವು

ಪ್ರಕೃತಿಯ ಸೂಕ್ಷ್ಮಾತಿಸೂಕ್ಷ್ಮ ಅಂಶಗಳನ್ನು ಹಾಗೂ ಜೀವವೈವಿಧ್ಯವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಲು ಸಾಧ್ಯವಿರುವ 'ಮ್ಯಾಕ್ರೋ ಫೋಟೊಗ್ರಫಿ' ಬಗ್ಗೆ ವಿದ್ಯುನ್‌ಗೆ ವಿಶೇಷ ಆಕರ್ಷಣೆ.

ವಿದ್ಯುನ್‌ಗೆ **creativenaturephotography.net** ಛಾಯಾಗ್ರಹಣದ ಅಭ್ಯಾಸಕ್ಕೆ ಉತ್ತಮ ವೇದಿಕೆ ಒದಗಿಸಿಕೊಟ್ಟಿದೆ. ಆ ಜಾಲತಾಣದಲ್ಲಿ ನುರಿತ ಛಾಯಾಗ್ರಾಹಕರು ಇದ್ದಾರೆ. ಅವರಿಂದ ಛಾಯಾಗ್ರಹಣ ಸಂಬಂಧ ಹಲವು ಸಲಹೆಗಳನ್ನು ಪಡೆಯುವ ಮೂಲಕ ವಿದ್ಯುನ್ ಅಭ್ಯಾಸ ಮುಂದುವರೆಸಿದ್ದಾನೆ. ರವಿಪ್ರಕಾಶ್ ಆ ವೆಬ್‌ತಾಣದ ಸಂಪಾದಕರಲ್ಲಿ ಒಬ್ಬರಾಗಿದ್ದಾರೆ.

## ಪ್ರಶಸ್ತಿ ತಂದುಕೊಟ್ಟ ಜೇಡರ ಬಲೆ

ಲಂಡನ್ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ ಆಯೋಜಿಸುವ ಪ್ರತಿಷ್ಠಿತ ಛಾಯಾಗ್ರಹಣ ಸ್ಪರ್ಧೆಗೆ ಕಳೆದ ವರ್ಷವೂ ವಿದ್ಯುನ್ ತೆಗೆದ ಛಾಯಾಚಿತ್ರಗಳನ್ನು ಕಳುಹಿಸಲಾಗಿತ್ತು. ಆಗ ಜ್ಯೂನಿಯರ್ ವಿಭಾಗದಲ್ಲಿ ಟಾಪ್ 5ರಲ್ಲಿ ಅವರ ಛಾಯಾಚಿತ್ರವೂ ಇತ್ತು. ಬೆಂಗಳೂರಿನ ರಸ್ತೆ ಬದಿಯೊಂದರಲ್ಲಿ ಬಲೆ ಹೆಣೆದಿದ್ದ ಜೇಡರ ಹುಳುವಿನ ಚಿತ್ರ 'ಸಿಟಿ ಸಿಗ್ನೇಚರ್'ಗೆ 'ಹೆಚ್ಚು ಪ್ರಶಂಸೆಗೆ ಒಳಪಟ್ಟ' (**Highly Commended**) ಛಾಯಾಚಿತ್ರ ಪ್ರಶಸ್ತಿ ಲಭಿಸಿತ್ತು. ಈ ಬಾರಿ 'ವೈಲ್ಡ್ ಲೈಫ್ ಫೋಟೊಗ್ರಾಫರ್ ಆಫ್ ದಿ ಇಯರ್ 2021' ಸ್ಪರ್ಧೆಯಲ್ಲಿ 'ವರ್ಷದ ಯುವ ವನ್ಯಜೀವಿ ಛಾಯಾಗ್ರಾಹಕ' ಪ್ರಶಸ್ತಿ ಒಲಿದಿದೆ. ವಿದ್ಯುನ್ ಮತ್ತೊಂದು ಛಾಯಾಚಿತ್ರಕ್ಕೆ 'ಹೆಚ್ಚು ಪ್ರಶಂಸೆಗೆ ಒಳಪಟ್ಟ' ಪ್ರಶಸ್ತಿಯೂ ಜೊತೆಯಾಗಿದೆ. ಸ್ಪರ್ಧೆಯಲ್ಲಿ ವಿದ್ಯುನ್, 'ಯಂಗ್ ಗ್ರ್ಯಾಂಡ್ ಟೈಟಲ್ ವಿನ್ನರ್' ಕೂಡ ಆಗಿದ್ದಾರೆ.

ವಿದ್ಯುನ್‌ಗೆ 'ವರ್ಷದ ಯುವ ವನ್ಯಜೀವಿ ಛಾಯಾಗ್ರಾಹಕ' ಪ್ರಶಸ್ತಿ ತಂದುಕೊಟ್ಟ ಛಾಯಾಚಿತ್ರದ ಹೆಸರು 'ಡೋಮ್ ಹೋಂ'. ವಿದ್ಯುನ್ ತೆಗೆದ ಸುಮಾರು 10 ಛಾಯಾಚಿತ್ರಗಳನ್ನು ಕಳೆದ ಡಿಸೆಂಬರ್‌ನಲ್ಲಿ ಸ್ಪರ್ಧೆಗೆ ಕಳುಹಿಸಲಾಗಿತ್ತು. ಅದರಲ್ಲಿ ಎರಡು ಛಾಯಾಚಿತ್ರಗಳಿಗೆ ಅಂತರರಾಷ್ಟ್ರೀಯ ಮನ್ನಣೆ ದೊರೆತಿದೆ.

ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿನ ಥೀಮ್ ಪಾರ್ಕ್‌ನಲ್ಲಿ ಈ ಛಾಯಾಚಿತ್ರ ಸೆರೆಹಿಡಿಯಲಾಗಿದೆ. ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇದ್ದ, ಕಾರಿನ ಬಿಡಿ ಭಾಗಗಳಿಂದ ರೂಪಿಸಿದ್ದ ಕನ್ನಡ ಅಕ್ಷರಗಳ ನಡುವೆ, ಟೆಂಟ್ ಸ್ಪೈಡರ್ ಎಂದು ಕರೆಯಲಾಗುವ ಜೇಡವೊಂದು ಬಲೆ ಹೆಣೆಯುತ್ತಿರುವುದು ವಿದ್ಯುನ್ ಕಣ್ಣಿಗೆ ಬಿದ್ದಿದೆ. ಜೇಡದ ಚಿತ್ರವನ್ನು ಹಾಗೇ ತೆಗೆದರೆ ಜೇಡವೊಂದೇ ಎದ್ದುಕಾಣುತ್ತದೆ. ಇದಕ್ಕೆ ಉತ್ತಮ ಹಿನ್ನೆಲೆ ದೊರೆತರೆ ಫೋಟೊ ಕಲಾತ್ಮಕವಾಗಿ ಮೂಡಿಬರುತ್ತದೆ ಎಂದು ಅಂದಾಜಿಸಿದ ವಿದ್ಯುನ್, ರಸ್ತೆಯಲ್ಲಿ ಆಟೋ ಚಲಿಸುತ್ತಿದ್ದ ಸಂದರ್ಭ ಕ್ಯಾಮೆರಾ ಕ್ಲಿಕ್ಕಿಸಿದ್ದು, ಚಿತ್ರಕ್ಕೆ ಅತ್ಯುತ್ತಮ ಹಿನ್ನೆಲೆ ದೊರಕಿಸಿಕೊಟ್ಟಿದೆ. ಆಟೋ ಬಣ್ಣ ಹಿನ್ನೆಲೆಯಲ್ಲಿ ಮಸುಕಾಗಿ ಮೂಡಿರುವುದು ಛಾಯಾಚಿತ್ರದ ಮೌಲ್ಯ ಹೆಚ್ಚಿಸುವಂತಿದೆ.

'ಫೋಟೊ ತೆಗೆಯುವಾಗ ಪ್ರತಿ ಬಾರಿ ವಾಹನಗಳು ಚಲಿಸುವಾಗಲೂ ಜೇಡರ ಬಲೆ ಅಲುಗಾಡುತ್ತಿತ್ತು. ಸಾಮಾನ್ಯವಾಗಿ ಒಂದೊಳ್ಳೆ ಫೋಟೊ ಮೂಡಿಬರಲು 30–35 ಟೇಕ್‌ಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಚಲಿಸುತ್ತಿದ್ದ ರಿಕ್ಷಾದ ಹಿನ್ನೆಲೆಯೊಂದಿಗೆ ಫೋಟೊ ತೆಗೆದಿದ್ದು ಕಲಾತ್ಮಕವಾಗಿ ಮೂಡಿಬರಲು ಕಾರಣವಾಯಿತು. ಈ ಜೇಡ ಗುಮ್ಮಟದ ಆಕಾರದಲ್ಲಿ ಬಲೆ ಹೆಣೆಯುತ್ತದೆ. ಹೀಗಾಗಿ ಈ ಛಾಯಾಚಿತ್ರಕ್ಕೆ 'ಡೋಮ್ ಹೋಂ' ಎಂದು ಶೀರ್ಷಿಕೆ ಕೊಡಲಾಯಿತು' ಎನ್ನುವ ವಿವರಣೆ ವಿದ್ಯುನ್ ಅವರದ್ದು.

'ಬ್ಲೂ ಆನ್ ಗ್ರೀನ್ ಅಂಡ್ ರೆಡ್' ಹೆಚ್ಚು ಪ್ರಶಂಸೆಗೆ ಒಳಗಾದ ವಿದ್ಯುನ್‌ರ ಚಿತ್ರ. ಶಾಲೆಯ ಉದ್ಯಾನದಲ್ಲಿ ತೆಗೆದ ಸುಂದರ ಚಿಟ್ಟೆಯ ಫೋಟೊ ನೋಡುಗರ ಮೆಚ್ಚುಗೆ ಗಳಿಸಿದೆ.

## ಅಪ್ಪ-ಮಗನಿಗೆ ಲಂಡನ್ ಗರಿಮೆ

ರವಿಶಂಕರ್ ಅವರ 'ಪ್ಯೂರ್ ಮ್ಯಾಜಿಕ್' ಛಾಯಾಚಿತ್ರಕ್ಕೆ 2014ರಲ್ಲಿ ಲಂಡನ್‌ನ 'ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ' ಪ್ರಶಸ್ತಿ ನೀಡಿತ್ತು. ಆಗ ವಿದ್ಯುನ್‌ಗೆ 3 ವರ್ಷ. ಈಗ ವಿದ್ಯುನ್‌ಗೂ ಇದೇ ಸಂಸ್ಥೆಯ ಪ್ರತಿಷ್ಠಿತ ಪ್ರಶಸ್ತಿ ಲಭಿಸಿದೆ. ಅಪ್ಪ–ಮಗ ಇಬ್ಬರಿಗೂ ಈ ಪ್ರಶಸ್ತಿ ಲಭಿಸಿರುವುದು ಅಪರೂಪದ ಸಂಗತಿ.

'ನಾನು ಹಾಗೂ ನನ್ನ ಮಗ ಫೋಟೊಗ್ರಫಿಯಲ್ಲಿ ಏನಾದರೂ ಅನನ್ಯ ಸಾಧನೆ ತೋರಬೇಕೆಂಬುದು ನನ್ನ ತಾಯಿ ಆಕಾಂಕ್ಷೆಯಾಗಿತ್ತು. ಅದು ಈ ಪ್ರಶಸ್ತಿ ಮೂಲಕ ಈಡೇರಿದೆ' ಎನ್ನುತ್ತಾರೆ ರವಿಶಂಕರ್. ವಿದ್ಯುನ್ ಛಾಯಾಗ್ರಹಣ ಕಲೆಗೆ ತಾಯಿ ನಮಿತಾ ಪ್ರೋತ್ಸಾಹ ಜೊತೆಗಿದೆ. ಅವರ ಪುಸ್ತಕ ಹಾಗೂ ಪ್ರಕೃತಿಪ್ರೀತಿ ಮಗನಲ್ಲಿ ಮುಂದುವರೆಯುತ್ತಿದೆ. 'ಮಕ್ಕಳನ್ನು ಪ್ರಕೃತಿಯೊಂದಿಗೆ ಬೆರೆಯಲು ಪೋಷಕರು ಬಿಡುವುದಿಲ್ಲ. ಅವರ ಮೇಲೆ ಅನವಶ್ಯಕ ನಿರ್ಬಂಧಗಳನ್ನು ಹೇರುತ್ತಾರೆ. ಅವರನ್ನು ಪರಿಸರದೊಂದಿಗೆ ಸಹಜವಾಗಿರಲು ಬಿಡಿ. ನಿಸರ್ಗದ ಹಲವು ವಿಸ್ಮಯಗಳು ಅವರಿಗೆ ಕಾಣುತ್ತವೆ' ಎನ್ನುತ್ತಾರೆ ನಮಿತಾ.

ಫೋಟೊಗ್ರಫಿ ಹೊರತಾಗಿ ವಿದ್ಯುನ್‌ಗೆ ಮತ್ತಷ್ಟು ಹವ್ಯಾಸಗಳಿವೆ. ಈಜು, ಸ್ಕೈಕ್ಲಿಂಗ್, ಲೆಗೊ ಬ್ಲಾಕ್ಸ್ ಜೊತೆ ಪುಸ್ತಕ ಓದುವ ಅಭ್ಯಾಸ ಕಲಾಸಕ್ತಿ ಹೆಚ್ಚಿಸಿಕೊಳ್ಳಲು ನೆರವಾಗಿದೆ. ಮುಂದೆ ಉತ್ತಮ ವನ್ಯಜೀವಿ ಛಾಯಾಗ್ರಾಹಕ ಅಥವಾ ಗಗನಯಾತ್ರಿ ಆಗುವ ಕನಸು ವಿದ್ಯುನ್‌ನದ್ದು. ವಿದ್ಯುನ್ ಕ್ಲಿಕ್ಕಿಸಿದ ಇನ್ನಷ್ಟು ಚಿತ್ರಗಳು ಇಲ್ಲಿವೆ: **vidyunclicks.in**

ಪ್ರತಿಕ್ರಿಯಿಸಿ: **feedback@sudha.co.in**